**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ**

**SPL.C(Electricity) No. 18/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಹೆಚ್. ಎಸ್. ಸಂತೋಷ್** | **PW - 10** |
| ತಂದೆಯ ಹೆಸರು | : | **ಸೋಮಶೇಖರಯ್ಯ** | **CW - 13** |
| ವಯಸ್ಸು | : | **37 ವರ್ಷ** | |
| ವೃತ್ತಿ | : | **ಕಂದಾಯ ಪರಿವೀಕ್ಷಕರು** | |
| ವಾಸ | : | **ಕುಶಾಲನಗರ** | |

**ಸಾಕ್ಷಿಯನ್ನು ದಿನಾಂಕ 19-11-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ**

1. ನಾನು ದಿನಾಂಕ 25.11.2020 ರಿಂದ ಈವರೆಗೂ ಕಂದಾಯ ಪರಿವೀಕ್ಷಕರಾಗಿ ಕುಶಾಲನಗರದಲ್ಲಿ ಕೆಲಸ ಮಾಡುತ್ತಿದ್ದೇನೆ.

2. ಕುಶಾಲನಗರ ಗ್ರಾಮಾಂತರ ಪೊಲೀಸರು ನಮ್ಮ ತಹಶೀಲ್ದಾರ್ ಕಛೇರಿಗೆ ಸರ್ವೆ ನಂಬರ್ 1/83 ಬಸವನಹಳ್ಳಿ ಗ್ರಾಮದ ಆನೆ ಮೃತ ಪಟ್ಟ ಜಾಗೆಯ ಪರಿಶೀಲನೆ ಮಾಡಿ ಛಹಣಿ ಪತ್ರಿಕೆ ಕೊಡುವಂತೆ ಕೋರಿದರು, ಅದರಂತೆ ನಾನು ದಿನಾಂಕ 30.08.2021 ರಂದು ಸ್ಥಳಕ್ಕೆ ಹೋಗಿ ಬೇಟಿ ಕೊಟ್ಟು, ಸ್ಥಳದಲ್ಲಿ ತೋರಿಸಿದ ಜಾಗೆಯ ಪಂಚನಾಮೆಯನ್ನು ಗ್ರಾಮಸ್ಥರ ಸಮಕ್ಷಮ ಮಾಡಿ ಪೊಲೀಸರಿಗೆ ಛಹಣಿ ಪತ್ರಿಕೆ ಕೊಟ್ಟಿರುತ್ತೇನೆ. ಸದರಿ ಸರ್ವೆ ನಂಬರ್ 1/83 ಎರಡು ಎಕರೆ ಜಮೀನು ಇದ್ದು, ಹೊನ್ನಯ್ಯ ಇವರಿಗೆ ಸೇರಿದ ಜಮೀನು ಇತ್ತು. ಆ ಬಗ್ಗೆ ನಾನು ವರದಿ ಸಲ್ಲಿಸಿರುತ್ತೇನೆ. ಸಾಕ್ಷಿ ಕೊಟ್ಟ ಪತ್ರ, ಪಂಚನಾಮೆ ಮತ್ತು ಛಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ನಿಪಿ-15** ರಿಂದ **ನಿಪಿ-17** ಎಂದು ಗುರುತಿಸಲಾಯಿತು.

**<u>ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಆರ್.ಎಲ್ ರವರಿಂದಃ</u>**

1. ನಾನು ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಕಛೇರಿಯಲ್ಲೆ ಕುಳಿತು ಪಂಚನಾಮೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.